

# ಕತೆಯಾದ ಭಿಕ್ಷುಕ

ಬಸ್ರಾದ ಸುಲ್ತಾನನಿಗೆ ಕತೆಗಳನ್ನು ಕೇಳುವುದೆಂದರೆ ಪಂಚಪ್ರಾಣ. ಕತೆ ಹೇಳುವವರನ್ನು ಸಭೆಗೆ ಕರೆಸುತ್ತಿದ್ದ. ಒಳ್ಳೆಯ ಕತೆ ಹೇಳಿ ಮನ ರಂಜಿಸಿದವರಿಗೆ ಯೋಗ್ಯ ಬಹುಮಾನ ಕೊಟ್ಟು ಕಳುಹಿಸುತ್ತಿದ್ದ. ಹೀಗೆ ಕತೆಗಳನ್ನು ಕೇಳಿ ಕೇಳಿ ಹೊಸ ಕತೆಗಳನ್ನು ಹೇಳುವವರೇ ಇರದ ಪರಿಸ್ಥಿತಿಯುಂಟಾಯಿತು. ಆಗ ಅವನು ತನ್ನ ಮನ ಅರಳಿಸುವ ಕತೆ ಹೇಳಿದವರಿಗೆ ಅವರ ತೂಕದಷ್ಟೇ ಚಿನ್ನದ ನಾಣ್ಯಗಳ ಬಹುಮಾನ ಕೊಡುವುದಾಗಿ ಡಂಗುರ ಸಾರಿದ.

ಪಟ್ಟಣದ ಒಂದು ಮೂಲೆಯಲ್ಲಿ ಒಬ್ಬ ಬಡ ದರ್ಜಿ ತನ್ನ ಹೆಂಡತಿಯೊಂದಿಗೆ ವಾಸವಾಗಿದ್ದ. ಅವನ ಸಂಪಾದನೆ ಸಂಸಾರ ನಿರ್ವಹಣೆಗೇ ಸಾಕಾಗುತ್ತಿರಲಿಲ್ಲ. ದರ್ಜಿಯ ಹೆಂಡತಿ ಸುಲ್ತಾನನ ಡಂಗುರವನ್ನು ಕೇಳಿದಳು. ಗಂಡನೊಂದಿಗೆ, 'ನಮ್ಮ ಮನೆಗೆ ಭಿಕ್ಷೆ ಬೇಡಿಕೊಂಡು ಒಬ್ಬ ಭಿಕ್ಷುಕ ಬರುತ್ತಾನಲ್ಲವೆ? ಅವನಿಗೆ ಒಳ್ಳೊಳ್ಳೆಯ ಕತೆಗಳು ಗೊತ್ತಿವೆ. ಅವನನ್ನು ಕರೆದು ಒಳ್ಳೆಯ ಊಟ ನೀಡಿ ಕತೆ ಹೇಳಲು ತಿಳಿಸುವ. ಆ ಕತೆಯನ್ನು ಸುಲ್ತಾನನಿಗೆ ಹೇಳಿದರೆ ನಮಗೆ ಬಹುಮಾನ ಬರುತ್ತದೆ. ನಮ್ಮ ಬಡತನ ನೀಗುತ್ತದೆ' ಎಂದು ಹೇಳಿದಳು.

ದರ್ಜಿ ಹೆಂಡತಿಯ ಮಾತಿಗೆ ಒಪ್ಪಿಕೊಂಡ. ಭಿಕ್ಷುಕ ಬಂದ ಕೂಡಲೇ ಅವನನ್ನು ಕರೆದು ಒಳ್ಳೆಯ ಕತೆ ಹೇಳುವುದಾದರೆ ಹೊಟ್ಟೆ ತುಂಬ ಊಟ ಬಡಿಸುವುದಾಗಿ ಹೇಳಿದ. ಭಿಕ್ಷುಕ ಸಂತೋಷದಿಂದ ಸಮ್ಮತಿಸಿದ. ಆದರೆ ದರ್ಜಿಯ ಹೆಂಡತಿ ಬಡಿಸಿದ ಊಟವನ್ನು ಆತುರದಿಂದ ತಿನ್ನುವಾಗ ಒಂದು ಮೀನಿನ ಮುಳ್ಳು ಅವನ ಗಂಟಲಿನಲ್ಲಿ ಸಿಲುಕಿಕೊಂಡಿತು. ಉಸಿರುಗಟ್ಟಿತು. ಕಣ್ಣುಗಳು ತಿರುಗಿದವು. ಅವನು ನಿಶ್ಚೇಷ್ಟಿತನಾಗಿ ಬಿದ್ದುಕೊಂಡ. ದರ್ಜಿಗೆ ಗಾಬರಿಯಾಯಿತು. 'ಎಂತಹ ಅನಾಹುತವಾಯಿತು ನೋಡು. ಸತ್ತೇಹೋದ! ನಾವು ಇವನ ಸಾವಿಗೆ ಕಾರಣರೆಂದು ಗೊತ್ತಾದರೆ ಮರಣ ದಂಡನೆಯಾಗುತ್ತದೆ' ಎಂದು ಭಯದಿಂದ ಹೇಳಿದ.

'ಹೆದರಬೇಡ. ರಾತ್ರಿಯಾಗಲಿ. ಇವನ ಶವವನ್ನು ಒಂದು ಜಮಖಾನೆಯಲ್ಲಿ ಸುತ್ತಿ ತೆಗೆದುಕೊಂಡು ಹೊರಗೆ ಹೋಗೋಣ'ಎಂದಳು ಹೆಂಡತಿ. ಹಾಗೆ ಅವರಿಬ್ಬರೂ ಶವವನ್ನು ಹೊತ್ತುಕೊಂಡು ಮನೆಯಿಂದ ಹೊರಟಾಗ ಪರಿಚಿತರು, ಎಲ್ಲಿಗೆ ಹೋಗುತ್ತಿದ್ದೀರೆಂದು ವಿಚಾರಿಸಿದರು. 'ಮಗುವಿಗೆ ತೀವ್ರವಾದ ಜ್ವರ ಬಂದಿದೆ. ಹಕೀಮರ ಬಳಿಗೆ ಚಿಕಿತ್ಸೆಗೆ ಹೋಗುತ್ತಿದ್ದೇವೆ'ಎಂದು ಅವರು ಮುಂದೆ ಹೋದರು. ಒಬ್ಬ ಹಕೀಮನ ಚಿಕಿತ್ಸಾಲಯದ ಬಾಗಿಲಿಗೆ ಭಿಕ್ಷುಕನ ದೇಹವನ್ನು ಒರಗಿಸಿ ನಿಲ್ಲಿಸಿ ಮನೆಗೆ ಬಂದರು.

ಸರಿರಾತ್ರಿಯಲ್ಲಿ ಹಕೀಮ ಹೊರಗೆ ಬರಲು ಬಾಗಿಲು ತೆಗೆದಾಗ ಅದಕ್ಕೊರಗಿ ನಿಂತಿದ್ದ ದೇಹ ನೆಲಕ್ಕುರುಳಿತು. ದೀಪದ ಬೆಳಕಿನಲ್ಲಿ ಅವನು ಅದು ಯಾರೆಂಬುದನ್ನು ನೋಡಿದ. 'ಅಯ್ಯೋ ದೇವರೇ, ಇವನು ನನ್ನ ಬಳಿಗೆ ಯಾವಾಗಲೂ ಔಷಧಿಗೆ ಬರುತ್ತಿದ್ದ ಭಿಕ್ಷುಕ. ನಾನು ಬಾಗಿಲು ತೆರೆಯುವ ಅವಸರದಿಂದಾಗಿ ಕೆಳಗೆ ಬಿದ್ದು ಸತ್ತುಹೋದ. ಈ ವಿಷಯ ತಿಳಿದರೆ ಜನರು ನನ್ನ ಬಳಿಗೆ ಚಿಕಿತ್ಸೆಗೆ ಬರುವುದಿಲ್ಲ. ಕೊಲೆಯ ಅಪರಾಧಕ್ಕೆ ಶಿಕ್ಷೆಯಾಗುತ್ತದೆ'ಎಂದು ಅವನಿಗೆ ಕಳವಳವಾಯಿತು. ತುಂಬ ಯೋಚಿಸಿ ಒಂದು ಉಪಾಯ ಮಾಡಿದ. ಸ್ವಲ್ಪ ದೂರದಲ್ಲಿ ಒಬ್ಬ ಧನಿಕನ ಪಾಕಶಾಲೆ ಇತ್ತು. ಹೊರಭಾಗದಲ್ಲಿ ಸಕ್ಕರೆ, ಉಪ್ಪು ಮತ್ತಿತರ ಅಡುಗೆ ಪದಾರ್ಥಗಳ ಚೀಲಗಳನ್ನು ಪೇರಿಸಿ ಇಟ್ಟಿದ್ದರು. ಹಕೀಮ ಭಿಕ್ಷುಕನನ್ನು ಹೆಗಲಲ್ಲಿ ಹೊತ್ತುಕೊಂಡು ಹೋಗಿ ಈ ಚೀಲಗಳ ಬಳಿ ನಿಲ್ಲಿಸಿ ಬಂದ.

ರಾತ್ರಿ ಧನಿಕನ ಸೇವಕರು ಸಕ್ಕರೆಯ ಚೀಲ ಒಳಗೆ ಒಯ್ಯಲು ಬಂದಾಗ ಕೈ